ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಏಳು ಹುದ್ದೆಗಳು ಖಾಲಿ ಇವೆ.

ಆ) ಖಾಲಿ ಹುದ್ದೆಗಳನ್ನು ತುಂಬುವ ಸಮಯದಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

ಗುಲ್ಬರ್ಗಾ ಜಿಲ್ಲೆಯ ರೈತರು ಬೆಳೆಯುವ ಬೆಳೆಗಳ ಅಂದಾಜು ಇಳುವರಿ ಸಮೀಕ್ಷೆ

3554 - ಶ್ರೀ ಬಸವಂತ ರೆಡ್ಡಿ ಪೋತಕಪಲ್ಲಿ (ಸೇಡಂ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ರೈತರು ಬೆಳೆಯುವ ಬೆಳೆಗಳಾದ ತೊಗರಿ, ಹೆಸರು ಕಪ್ಪೆ, ಜೋಳ ಹಾಗೂ ಆಂಧ್ರ ಗಡಿ ಪ್ರಾಂತ್ಯದಲ್ಲಿ ಬೆಳೆಯುವ ಭತ್ತ ಪ್ರತಿ ಎಕರೆಗೆ ಸರಾಸರಿಬೆಳೆ ಇರುವಳಿ ಅಂದಾಜು ವರದಿ ಅಂದಾಜು ಮಾಡುವುದು 10 ವರ್ಷಗಳ ಸರಾಸರಿ ಬೆಳೆ ಇಳುವರಿ ತೆಗೆದರೆ ಮಾತ್ರ ನಿಜವಾದ ಸರಾಸರಿ ಬೆಳೆಯ ಇಳುವರಿಯ ಲೆಕ್ಕ ಸಿಕ್ಕುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ನಮ್ಮ ಭಾಗದ ರೈತರು ಪ್ರತಿ ವರ್ಷ ಬೀಜ ರಸಾಯನಿಕ ಗೊಬ್ಬರ, ಹಾಗೂ ಕ್ರಿಮಿನಾಶಕ ಮತ್ತು ಒಕ್ಕಲುತನಕ್ಕೆ ತಗಲುಖರ್ಚುಗಳು ಇತ್ಯಾದಿ ಮಾಡಿದರೆ ಅತಿವೃಷ್ಟಿಯಿಂದಲೂ ಅನಾವೃಷ್ಟಿಯಿಂದ ನೈಸರ್ಗಿಕ ವಿಕೋಪದಿಂದ 10 ವರ್ಷಗಳಲ್ಲಿ ಆರೇಳು ವರ್ಷಗಳು ನಷ್ಟವಾಗಿ ಮೂರು ನಾಲ್ಕು ವರ್ಷ ಏನಾದರೂ ಬೆಳೆ ಬೆಳೆಯ ಬಹುದಲ್ಲವೇ?

ಇ) ಈ ಪ್ರಕಾರ ರೈತ 10 ವರ್ಷಗಳಲ್ಲಿ 6-7 ವರ್ಷಗಳ ನಷ್ಟ ಅನುಭವಿಸಿ 3-4 ವರ್ಷ ಬೆಳೆಯಸರಾಸರಿ ಬೆಳೆ ಇಳುವರಿ ಅಂದಾಜು ಈ 10 ವರ್ಷ ಬೆಳೆ ಬೆಳೆದ ಅಂದಾಜು ಇಳುವರಿ ತೆಗೆಯಬಹುದೇಕೆ?

ಈ) ಈ ಪ್ರಕಾರಸರಾಸರಿ ಇಳುವರಿ ತೆಗೆದರೆ ರೈತರಿಗೆ ಈಗ ಸಿಕ್ಕುವ ಬೆಲೆಯಿಂದ ಎಷ್ಟು ನಷ್ಟವಾಗುವುದು?

ಉ) ರೈತ ಹುಟ್ಟಿನಿಂದಲೂ ಸಾಲದಲ್ಲಿಯೇ ಮುಳುಗುತ್ತಾನೆ ಎಂಬುದು ಸರ್ಕಾರ ಗಮನಿಸಿದೆಯೇ?

ಊ) ಇದರ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು)

ಅ) ಕೃಷಿ ಉತ್ಪಾದನೆಯಲ್ಲಿ ಹೊಸ ಸಂಶೋಧನೆಗಳ ಆಧಾರದ ಮೇಲೆ ಸುಧಾರಿತ ಕ್ರಮಗಳನ್ನು ಕೈಗೊಳ್ಳುತ್ತಿರುವುದರಿಂದ ಬೆಳೆಗಳ ಇಳುವರಿಯು ಪ್ರತಿ ವರ್ಷ ಹೆಚ್ಚಾಗಿರುತ್ತಿರುವುದರಿಂದ ಇಳುವರಿ ಸರಾಸರಿಯನ್ನು ಪಡೆಯಲು 10 ವರ್ಷದ ಇಳುವರಿಯನ್ನು ಪರಿಗಣಿಸುವುದು ವೈಜ್ಞಾನಿಕವಾದುದಲ್ಲ.

ಆ) ನೈಸರ್ಗಿಕ ಕಾರಣಗಳಿಂದ ಕೃಷಿ ಉತ್ಪಾದನೆಯಲ್ಲಿ ಏರುಪೇರು ಆಗುವುದು ಸಹಜ. ಈ ರೀತಿ ಇಳುವರಿ ಕಡಿಮೆಯಾದಾಗ ರೈತರಿಗೆ ನಷ್ಟವಾಗಿದ್ದಲ್ಲಿ ನಷ್ಟ ಪರಿಹಾರವನ್ನು ತುಂಬಿಕೊಡಲು ಬೆಳೆ ವಿಮಾಯೋಜನೆ ಜಾರಿಯಲ್ಲಿದೆ. ಇಂತಹ ಸಂದರ್ಭದಲ್ಲಿ 5ವರ್ಷಗಳ ಇಳುವರಿಯ ಸರಾಸರಿಯನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತಿದೆ. ಬೆಳೆಯ ಇಳುವರಿಯ ಸರಾಸರಿಯನ್ನು 10 ವರ್ಷಗಳಿಗೆ ತೆಗೆದುಕೊಂಡರೆ ಸರಾಸರಿ ಇಳುವರಿಯು ಕಡಿಮೆಯಾಗುವುದರಿಂದ ಬೆಳೆ ವಿಮಾ ಯೋಜನೆಯಿಂದ ಪರಿಹಾರಸಿಗುವ ಸಾಧ್ಯತೆಗಳು ಕಡಿಮೆ. ಬೆಳೆ ವಿಮಾ ಯೋಜನೆಯ ಸಲುವಾಗಿ ಈಗಿರುವ 5

ವರ್ಷದ ಸರಾಸರಿ ಇಳುವರಿಯ ಬದಲು 3 ವರ್ಷದ ಸರಾಸರಿ ಇಳುವರಿಯನ್ನು ತೆಗೆದುಕೊಳ್ಳುವ ಸಲುವಾಗಿ ಮನವಿಗಳು ಬರುತ್ತಿವೆ.

ಈ) ಕೃಷಿ ಉತ್ಪನ್ನಗಳ ಬೆಂಬಲ ಬೆಲೆಯನ್ನು ಆಯಾ ವರ್ಷದ ಉತ್ಪಾದನಾ ವೆಚ್ಚದ ಆಧಾರದ ಮೇಲೆಯೇ ನಿಗದಿಪಡಿಸಲಾಗುತ್ತಿದೆಯೇ ವಿನಃ 5 ವರ್ಷ ಅಥವಾ 10 ವರ್ಷಗಳ ಸರಾಸರಿ ಇಳುವರಿಯನ್ನು ಪರಿಗಣಿಸಲಾಗುತ್ತಿಲ್ಲ.

ಉ) ರೈತರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಕಾಲಕಾಲಕ್ಕೆ ಅನೇಕ ಯೋಜನೆಗಳನ್ನು ಸರ್ಕಾರವು ರೂಪಿಸುತ್ತಿದೆ.

ಊ) ಈ ದಿಶೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಹಲವಾರು ಕ್ರಮಗಳನ್ನು ಕೈಗೊಳ್ಳುತ್ತಿದೆ.

1) ರಿಯಾಯಿತಿ ದರದಲ್ಲಿ ಕೃಷಿ ಸಾಮಗ್ರಿಗಳ ವಿತರಣೆ.
2) ಅಲ್ಪಾವಧಿ ಸಾಲವನ್ನು ಧೀರ್ಘಾವಧಿ ಸಾಲವಾಗಿ ಪರಿವರ್ತಿಸುವುದು (ಅಗತ್ಯವಿದ್ದಾಗ)
3) ಕಿರುಬುತ್ತಿ ಚೀಲಗಳ ವಿತರಣೆ
4) ನೈಸರ್ಗಿಕ ವಿಕೋಪಗಳಿಂದ ಉಂಟಾದ ತೊಂದರೆಗಳಿಗೆ ಪರಿಹಾರ ಕಾರ್ಯಕ್ರಮಗಳು
5) ಮಾರುಕಟ್ಟೆ ಬೆಲೆ ಕುಸಿದಾಗ, ಬೆಂಬಲ ಬೆಲೆಯಲ್ಲಿ ಸರ್ಕಾರವು ಆಹಾರಧಾನ್ಯಗಳನ್ನು ಕೊಳ್ಳುವುದು.
6) ಬೆಳೆ ವಿಮಾ ಯೋಜನೆ
7) ನೀರಾವರಿ ಸೌಲಭ್ಯ ಕಲ್ಪಿಸುವುದು
8) ಭೂಸಾರ ಸಂರಕ್ಷಣಾ ಕಾರ್ಯಕ್ರಮಗಳು
9) ಅಧಿಕ ಇಳುವರಿಗಾಗಿ ಸುಧಾರಿತ ತಳಿಗಳ ಅಭಿವೃದ್ಧಿ ಕಾರ್ಯಕ್ರಮ
10) ಕೃಷಿ ಉತ್ಪನ್ನಗಳ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವುದು.
11) ಕೃಷಿ ವಿಸ್ತರಣಾ ಯೋಜನೆ ಇತ್ಯಾದಿ

ರಸಗೊಬ್ಬರದ ಅಭಾವ

3689 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) ; ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೊಬ್ಬರದ ಬೆಲೆ ಏರಿಕೆಯ ದ್ವಿಮುಖ ಬೆಲೆ ನೀತಿಯಿಂದ ಹೆಚ್ಚಿನ ಹೆಚ್ಚು ಗೊಬ್ಬರ ಸಣ್ಣ ಅತಿ ಸಣ್ಣ ರೈತರ ಹೆಸರಿನಲ್ಲಿ ಖರೀದಿಯಾಗಿ ದಾಸ್ತಾನುದಾರರ ಹತ್ತಿರ ದೃಢೀಕರಣವಾಗಿ ಇದರಿಂದ ಗೊಬ್ಬರದ ಅಭಾವವಾಗಿ ಹೆಚ್ಚಿನ ಬೆಲೆಯಲ್ಲಿ ಮಾರಾಟವಾಗುವ ಸಾಧ್ಯತೆಗಳಿಲ್ಲವೆ?

ಆ) ಇದರಿಂದ ರೈತರಿಗೆ ಗೊಬ್ಬರದ ಖರೀದಿ ಮಾಡಲು ಇನ್ನೂ ಹೆಚ್ಚಿನ ತೊಂದರೆಯಾಗುವುದಿಲ್ಲವೇ?

ಇ) ರೈತರು ಬೆಳೆದಿರುವ ಬೆಳೆಗೆ ಬೆಲೆ ಇಲ್ಲದೆ ರೈತ ಪ್ರತಿವರ್ಷ ನಷ್ಟದಲ್ಲಿದ್ದು ಸಾಲದಲ್ಲಿ ಮುಳುಗಿರುವುದು ನಿಜವಲ್ಲವೇ?

ಈ) ರೈತರ ಬೆಳೆಗೆ ತಕ್ಕ ಬೆಲೆ ಇಲ್ಲದೆ ನಷ್ಟವಾಗುವಾಗ, ಇನ್ನೂ ಹೆಚ್ಚಿನ ಬೆಲೆಯಲ್ಲಿ ಗೊಬ್ಬರವನ್ನು ಖರೀದಿ ಮಾಡಲು ಅಸಮರ್ಥವಾಗಿ ಬೆಳೆಯದಿದ್ದರೆ ರಾಜ್ಯ, ರಾಷ್ಟ್ರಕ್ಕೆ ನಷ್ಟವಾಗುವುದಿಲ್ಲವೇ?

ಉ) ರೈತರ ಬೆಳೆಗಳಿಗೆ ಅವಶ್ಯಕವಾದ ರಸಗೊಬ್ಬರದ ಬೆಲೆ [illegible]